ಸಾಕ್ಷಿಯನ್ನು ದಿಃ 17-08-2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ ಸಿ ಎಸ್ (ಪ್ರತಿವಾದಿ 1 ರಿಂದ 4 ರ ಪರವಾಗಿ)**

ಮುಖ್ಯ ವಿಚಾರಣೆಯಲ್ಲಿ ಬರೆದ ವಿಷಯದ ಮಾಹಿತಿ ಇದೆ. ವಾದಿ ಪ್ರತಿವಾದಿಯರ ಜಮೀನು ಪಕ್ಕದಲ್ಲಿ ನನ್ನ ಆಸ್ತಿ ಇಲ್ಲ. ಆದರೆ, ಪ್ರತಿವಾದಿಯ ಪಕ್ಕದಲ್ಲಿ ನನ್ನ ಮನೆ ಇದೆ. ನಮ್ಮ ಮನೆಯ ಕಿಡಕಿಯ ವಿಚಾರವಾಗಿ ತಕರಾರು ಆಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಬಾಯಿ ಮಾತಿನಲ್ಲಿ ಬಗೆಹರಿದಿದೆ ಎಂದು ಹೇಳುತ್ತಾರೆ. ಅಂದಿನಿಂದ ಇಂದಿನವರೆಗೆ ನನಗೂ ಪ್ರತಿವಾದಿ ನಂ.1 ರಿಂದ 4 ರವರಿಗೂ ಮನಸಾ-ಮನಸಾ ಸರಿ ಇಲ್ಲ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಯ ಮನೆತನಕ್ಕೆ ಒಟ್ಟು 11 ಎಕರೆ 10 ಗುಂಟೆ ಜಮೀನು ಇದೆ. ಅವುಗಳ ಸರ್ವೇ ನಂಬರ ಗೊತ್ತಿಲ್ಲ. ಉಳಿದ ಆಸ್ತಿಗಳ ಬಗ್ಗೆ ಮಾಹಿತಿ ಇಲ್ಲ. ವಾದಿಯರ ಪೈಕಿ ಕಮಲಮ್ಮ ಮತ್ತು ಲೀಲಮ್ಮ ಇವರ ಹೆಸರು ಗೊತ್ತಿದ್ದು, ಉಳಿದವರ ಹೆಸರು ಗೊತ್ತಿಲ್ಲ. ಅದರೆ, ಅವರು ನಾಲ್ಕು ಜನ ಹೆಣ್ಣು ಮಕ್ಕಳಿದ್ದಾರೆ. ವಾದಿಯರೆಲ್ಲರೂ ತಮ್ಮ ತಮ್ಮ ಗಂಡನ ಮನೆಯಲ್ಲಿದ್ದಾರೆ ಎಂದರೆ ಮೂರು ಜನ ಗಂಡನ ಮನೆಯಲ್ಲಿದ್ದು, ಲೀಲಮ್ಮ ತವರು ಮನೆಯಲ್ಲಿದ್ದಾರೆ ಎಂದು ಹೇಳುತ್ತಾರೆ. ಅವರು ಕಳೆದ 15 ವರ್ಷದಿಂದ ಕುರ್ತಕೋಟಿಯಲ್ಲಿ ವಾಸವಾಗಿದ್ದಾರೆ.

ದಾವಾ ಆಸ್ತಿಗಳು ವಾದಿ ಪ್ರತಿವಾದಿಯರ ಕುಟುಂಬಕ್ಕೆ ಹೇಗೆ ಬಂದವು ಎಂದರೆ ಪಾರ್ವತೆವ್ವನಿಗೆ ಅವರ ತಂದೆಯಿಂದ ಬಂದಿವೆ ಎಂದು ನನ್ನ ಅಜ್ಜ ಹೇಳಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳ ಬಗ್ಗೆ ನಾನು ದಾಖಲೆಗಳನ್ನು ನೋಡಿಲ್ಲ. ಪಾರ್ವತೆವ್ವನ ಗಂಡನ ಹೆಸರು ಗೊತ್ತಿಲ್ಲ. ಸದ್ಯಕ್ಕೆ ದಾವಾ ಆಸ್ತಿಗಳು ಯಾರ ಹೆಸರಿನಲ್ಲಿವೆ ಗೊತ್ತಿಲ್ಲ. ದಾವಾ ಆಸ್ತಿಗಳು ಪಾರ್ವತೆವ್ವನಿಗೆ ಅವರ ತಂದೆಯಿಂದ ಬಂದಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾರ್ವತೆವ್ವನ ಮದುವೆಗೆ ಮುಂಚೆ ಆಸ್ತಿ ಹಚ್ಚಬೇಕು ಎಂಬ ಕರಾರು ಇದ್ದ ಕಾರಣ ಪಾರ್ವತೆವ್ವನ ಗಂಡ ಯಲ್ಲಪ್ಪ ದಾವಾ ಆಸ್ತಿಯನ್ನು ತಾನೇ ಖರೀದಿಸಿ ಪಾರ್ವತೆವ್ವನ ಹೆಸರಿಗೆ ಭಕ್ಷೀಸ ಮಾಡಿದ್ದ ಎಂದರೆ ಗೊತ್ತಿಲ್ಲ. ನಂತರ ಪಾರ್ವತೆವ್ವ ದಾವಾ ಆಸ್ತಿಯನ್ನು ತನ್ನ ಗಂಡು ಮಗನಾದ ಬಸವಣ್ಣೆಪ್ಪನಿಗೆ ಹಕ್ಕು ಬಿಟ್ಟು ಕೊಟ್ಟಿದ್ದಳು ಎಂದರೆ ಗೊತ್ತಿಲ್ಲ. ಬಸವಣ್ಣೆಪ್ಪನಿಗೆ ಮೊದಲ ಹೆಂಡತಿ ಗಂಗವ್ವ ಹಾಗೂ

ಯಲ್ಲಪ್ಪ ಎಂಬ ಮಗ ಇದ್ದರು ಎಂದರೆ ಸರಿ. ಬಸವಣ್ಣೆಪ್ಪ ತನ್ನ ಮೊದಲ ಹೆಂಡತಿ ಗಂಗವ್ವ ತೀರಿಕೊಂಡ ನಂತರ ತಾನು 2 ನೇ ಮದುವೆ ಆಗುವ ಮೊದಲು ಅರ್ಧ ಆಸ್ತಿಯನ್ನು ತನ್ನ ಮಗ ಯಲ್ಲಪ್ಪನಿಗೆ ಬಿಟ್ಟು ಕೊಟ್ಟಿದ್ದ ಎಂದರೆ ಸರಿ. ಬಸವಣ್ಣೆಪ್ಪ 2 ನೇ ಮದುವೆಯಾಗಿ ತೀರಿಕೊಂಡ ನಂತರ ಸದರಿ ಆಸ್ತಿಗಳು ಪ್ರತಿವಾದಿ ನಂ.1 ರಿಂದ 4 ರವರ ಹೆಸರಿಗೆ ಆಸ್ತಿಗಳು ಆಗಿವೆ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಬಸವಣ್ಣೆಪ್ಪನ ಮೊದಲ ಮಗ ಯಲ್ಲಪ್ಪನನ್ನು 4 ನೇ ವಾದಿ ಲೀಲವ್ವ ಜೋಪಾನ ಮಾಡಿದ್ದಾಳೆ ಎಂದು ಹೇಳುತ್ತಾರೆ. ಸದರಿ ಯಲ್ಲಪ್ಪ ಅವಿವಾಹಿತನಾಗಿ ತೀರಿಕೊಂಡಿದ್ದಾನೆ ಎಂದರೆ ಸರಿ. ಆತ ತೀರಿಕೊಂಡ ನಂತರ ಪ್ರತಿವಾದಿ ನಂ.1 ರಿಂದ 4 ವಾರಸಾ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಯಲ್ಲಪ್ಪ ತೀರಿಕೊಂಡ ನಂತರ ಎಲ್ಲ ಆಸ್ತಿ ಪ್ರತಿವಾದಿ ನಂ. 1 ರಿಂದ 4 ರವರಿಗೆ ಹೋಗುತ್ತದೆ ಎಂಬ ಹೊಟ್ಟೆ ಕಿಚ್ಚಿನಿಂದ ವಾದಿಯರು ಈ ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ. ನನಗೆ ದಾವೆ ಹಾಗೂ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇರದೆ ಇದ್ದರೂ ಸಹ ಪ್ರತಿವಾದಿ ನಂ. 1 ರಿಂದ 4 ರ ಮೇಲೆ ಹಗೆ ಸಾಧಿಸುವ ಸಲುವಾಗಿ ವಾದಿಯರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ವಿ ಎಮ್. ಹೆಚ್ (ಪ್ರತಿವಾದಿ ನಂ.5 ರ ಪರವಾಗಿ)**

ದಾವಾ ಆಸ್ತಿ ಒಟ್ಟು 11 ಎಕರೆ 10 ಗುಂಟೆ ಇತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ಪಾರ್ವತೆವ್ವ ತನ್ನ ಜೀವಿತಾವಧಿಯಲ್ಲಿ ತನ್ನ ಮಗ ಬಸವಣ್ಣೆಪ್ಪನಿಗೆ ಬಿಟ್ಟುಕೊಟ್ಟಿದ್ದಳು ಎಂದರೆ ಗೊತ್ತಿಲ್ಲ. ಬಸವಣ್ಣೆಪ್ಪ ತನ್ನ ಜೀವಿತಾವಧಿಯಲ್ಲಿ ವಾಟ್ನಿ ಮಾಡಿ ತನ್ನ ಮಗ ಯಲ್ಲಪ್ಪ @ ರಾಜು ಈತನಿಗೆ 6 ಎಕರೆ ಜಮೀನು ನೀಡಿದ್ದು, ತನಗೆ 5 ಎಕರೆ 10 ಗುಂಟೆ ಇಟ್ಟುಕೊಂಡಿದ್ದರು ಎಂದರೆ ಸರಿ. ಯಲ್ಲಪ್ಪ ಅವಿವಾಹಿತನಾಗಿ ತೀರಿಕೊಂಡ ಎಂದರೆ ಸರಿ. ಬಸವಣ್ಣೆಪ್ಪ ತೀರಿಕೊಂಡ ನಂತರ ಆತನ ಹೆಸರಿನಲ್ಲಿದ್ದ ಆಸ್ತಿಗಳಿಗೆ ಪ್ರತಿವಾದಿ ನಂ. 1 ರಿಂದ 4 ವಾರಸಾ ಆದರು ಎಂದರೆ ಸರಿ. ಪ್ರತಿವಾದಿ ನಂ. 5 ನಮ್ಮೂರಿನವರು ಎಂದರೆ ಸರಿ. ಯಲ್ಲಪ್ಪ ಹಾಗೂ ಪ್ರತಿವಾದಿ ನಂ.1 ರಿಂದ 4 ರವರಿಂದ 5 ನೇ ಪ್ರತಿವಾದಿ 2 ಎಕರೆ ಜಮೀನನ್ನು 2013 ರಲ್ಲಿ ಖರೀದಿಸಿದ್ದಾರೆ ಎಂದರೆ ಸರಿ. ಈ ವಿಷಯ ವಾದಿಯರಿಗೆ ಗೊತ್ತಿತ್ತು ಎಂದರೆ 4 ನೇ ವಾದಿಗೆ ಗೊತ್ತಿತ್ತು, ಉಳಿದವರ ಬಗ್ಗೆ ಗೊತ್ತಿಲ್ಲ ಎಂದರೆ ಹೇಳುತ್ತಾರೆ. ಯಲ್ಲಪ್ಪ ಜೀವಂತ ಇದ್ದಾಗ 5 ನೇ ಪ್ರತಿವಾದಿ ಖರೀದಿಸಿದ ಆಸ್ತಿಯ ಬಗ್ಗೆ

ತಕರಾರು ಮಾಡಿಲ್ಲ ಎಂದರೆ ಸರಿ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದಂತೆ 5 ನೇ ಪ್ರತಿವಾದಿ ಪರ ವಕೀಲರು ಪ್ರತಿವಾದಿ ನಂ.1 ರಿಂದ 4 ರ ಪರವಾಗಿ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.

ಸಾಕ್ಷಿಯನ್ನು ದಿಃ 17-08-2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ವಿ ಸಿ ಎಸ್ (ಪ್ರತಿವಾದಿ 1 ರಿಂದ 4 ರ ಪರವಾಗಿ)</u>**

ಈ ದಾವೆಯನ್ನು ಯಾರು ಹಾಕಿದ್ದಾರೆ ಹಾಗೂ ಯಾರ ವಿರುದ್ಧ ಹಾಕಿದ್ದಾರೆ ಗೊತ್ತಿಲ್ಲ. ವಾದಿ ಪ್ರತಿವಾದಿಯರು ಕುಟುಂಬಕ್ಕೆ ಎಷ್ಟು ಆಸ್ತಿಗಳು ಇದ್ದವು ಮತ್ತು ಆ ಆಸ್ತಿಗಳು ಯಾರಿಂದ ಬಂದವು ಗೊತ್ತಿಲ್ಲ. ದಾವಾ ಆಸ್ತಿಗಳ ಸರ್ವೇ ನಂಬರ ಹಾಗೂ ಮನೆ ನಂಬರ ಗೊತ್ತಿಲ್ಲ. ಒಟ್ಟು 11 ಎಕರೆ ಜಮೀನು ಇದೆ. ಅದರಲ್ಲಿ ಎರಡು ಹಿಸ್ಸಾ ಆಗಿದೆ. ಸದ್ಯಕ್ಕೆ ದಾವಾ ಆಸ್ತಿಗಳು ಯಾರ ಹೆಸರಿನಲ್ಲಿವೆ ಗೊತ್ತಿಲ್ಲ. ದಾವಾ ಆಸ್ತಿಗಳು ಮೊದಲು ಪಾರ್ವತೆವ್ವನ ಹೆಸರಿನಲ್ಲಿದ್ದವು. ಸದರಿ ಆಸ್ತಿಗಳು ಪಾರ್ವತೆವ್ವನಿಗೆ ಹೇಗೆ ಬಂದವು ಗೊತ್ತಿಲ್ಲ. ಪಾರ್ವತೆವ್ವನ ನಂತರ ಯಾರ ಹೆಸರಿನಲ್ಲಿ ಆಗಿವೆ ಗೊತ್ತಿಲ್ಲ. ವಾದಿ ಪ್ರತಿವಾದಿಯರ ಮನೆತನದ ಆಸ್ತಿಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಬಗ್ಗೆ ವಾದಿಯರು ಏನು ಹೇಳಿದ್ದಾರೆ ಅದನ್ನು ಮಾತ್ರ ನಾನು ಹೇಳುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯನ್ನು ಯಾರು ಬರೆಯಿಸಿದ್ದಾರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ವಾದಿ ಪ್ರತಿವಾದಿಯರು ನಾಲ್ಕು ಜನ ಹೆಣ್ಣು ಮಕ್ಕಳು, ಒಬ್ಬರು ಗಂಡು ಮಗ ಇದ್ದು, ಅವರು ಎಲ್ಲರೂ ಕೂಡಿ ಆಸ್ತಿ ಉಣ್ಣುತ್ತಿದ್ದು, ಈಗ ಬಸವಣ್ಣೆಪ್ಪನ ಮಕ್ಕುಳು ಎಲ್ಲ ಆಸ್ತಿ ಕಸಿದುಕೊಂಡಿದ್ದು, ಆ ಬಗ್ಗೆ ಸಾಕ್ಷಿ ಹೇಳಲು ಬಂದಿದ್ದೇನೆ ಎಂದು ಹೇಳುತ್ತಾರೆ. ವಾದಿಯರು ಯಾವ ಕಾಲಕ್ಕೂ ದಾವಾ ಆಸ್ತಿ ಅನುಭವಿಸಿಲ್ಲ ಎಂದರೆ ಸರಿಯಲ್ಲ. ವಾದಿಯರ ಮಾತು ಕೇಳು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಸಹ ವಾದಿಯರಿಗೆ ಅನುಕೂಲವಾಗುವಂತೆ ಅವರು ಹೇಳಿದ ಹಾಗೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ.ವಿ ಎಮ್. ಹೆಚ್ (ಪ್ರತಿವಾದಿ ನಂ.5 ರ ಪರವಾಗಿ)</u>**

ನನಗೆ ಪ್ರತಿವಾದಿ ನಂ.5 ರ ಪರಿಚಯವಿಲ್ಲ. ಪ್ರತಿವಾದಿ ನಂ.5 ಕುರ್ತಕೋಟಿ ಗ್ರಾಮದವರು ಎಂದರೆ ಸರಿ. ಸರ್ವೇ ನಂ.719/1 ಕ್ಷೇತ್ರ 2 ಎಕರೆ ಜಮೀನನ್ನು 5 ನೇ ಪ್ರತಿವಾದಿ ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿಗೆ 5 ನೇ ಪ್ರತಿವಾದಿ ಮಾಲೀಕನಾಗಿದ್ದು, ಸ್ವಾಧೀನದಲ್ಲಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಸಹ ಕುರ್ತಕೋಟಿ ಗ್ರಾಮದವನು ಎಂದರೆ ಸರಿ. ಮೇಲಿನ ಆಸ್ತಿಯನ್ನು 5 ನೇ ಪ್ರತಿವಾದಿ ಖರೀದಿಸಿ ಸ್ವಾಧೀನದಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತತದ್ದೇನೆ ಎಂದರೆ ಸರಿಯಲ್ಲ.

(ಉಳಿದಂತೆ 5 ನೇ ಪ್ರತಿವಾದಿ ಪರ ವಕೀಲರು ಪ್ರತಿವಾದಿ ನಂ.1 ರಿಂದ 4 ರ ಪರವಾಗಿ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.